ಕ್ರಮ ಸಂಖ್ಯೆ	ಸಾರ್ವಜನಿಕ ಉದ್ದಿಮೆಗಳ ಹೆಸರು	ನಿವ್ವಳ ನಷ್ಟ
15)	ಕರ್ನಾಟಕ ರಾಜ್ಯ ಜವಳಿ ನಿಗಮ ನಿ.	47.71
16)	ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿ.	36-65
17)	ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿ.	36-02
18)	ಮೈಸೂರು ಟ್ಯೊಬ್ಯಾಕೋ ಕಂ. ನಿ.	34-10
19)	ಚಾಮುಂಡಿ ಮೆಷಿನ್ ಟೂಲ್ಸ್ ನಿಯಮಿತ	29-87
20)	ಕರ್ನಾಟಕ ಆಗ್ರೋ ಪ್ರೊಟೀನ್ಸ್ ನಿಯಮಿತ	29-10
21)	ಕರ್ನಾಟಕ ರಾಜ್ಯ ವನಿಲ್ಸ್ ನಿಯಮಿತ	26-21
22)	ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿ.	12.41
23)	ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿ.	10-88
24)	ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತ.	9-76
25)	ಕರ್ನಾಟಕ ಚಲನಚಿತ್ರ ಕೈಗಾರಿಕಾಭಿವೃದ್ಧಿ ನಿಗಮ ನಿ.	9-42
26)	ಮೈಸೂರು ಕಾಸ್ಟಟಿಕ್ಸ್ ನಿ.	9-06
27)	ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿ.	6-41
28)	ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿ.	3-40
29)	ಕರ್ನಾಟಕ ಒಳನಾಡು ಮೀನುಗಾರಿಕಾ ಅಭಿವೃದ್ಧಿ ನಿಗಮ ನಿ.	2-09
30)	ಮೈಸೂರು ಮ್ಯಾಚ್ ಕಂಪನಿ ನಿಯಮಿತ	1-46
31)	ಕರ್ನಾಟಕ ಹಾಲು ಉತ್ಪಾದಕಗಳ ನಿಯಮಿತ.	0-03
	ಒಟ್ಟು ನಷ್ಟ	13302-03

ವಿಷಯ :- ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯ ವಿಭಾಗಗಳ ಪುನರ್ ವಿಂಗಡಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2312 (2386)

ಶ್ರೀ ಆಶೋಕ್ ಕಾಟ್ವೆ (ಹುಬ್ಬಳ್ಳಿ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯ ವಿಭಾಗಗಳ ಪುನರ್ ವಿಂಗಡಣೆ ಕಾರ್ಯ ಯಾವ ಹಂತದಲ್ಲಿದೆ?

ಆ) ಯಾವ ಆಧಾರದ ಮೇಲೆ ಮರು ವಿಂಗಡಣೆ ನೀಡಲಾಗಿದೆ?

ಇ) ಮರು ವಿಂಗಡಣೆ ಕಾರ್ಯ ಮುಕ್ತಾಯಗೊಂಡ ಮೇಲೆ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಸರ್ಕಾರ ಸ್ವೀಕರಿಸುವುದೇ? ಹಾಗಿದ್ದಲ್ಲಿ ಅವುಗಳನ್ನು ಎಷ್ಟು ದಿನಗಳಲ್ಲಿ ಇತ್ಯರ್ಥ ಗೊಳಿಸಲಾಗುವುದು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಇನ್ನೂ ಪ್ರಾರಂಭವಾಗಿಲ್ಲ.

ಆ) ಜನಸಂಖ್ಯೆ.

ಇ) ವಾರ್ಡ್‌ಗಳ ಪುನರ್ ವಿಂಗಡಣೆ ಸಲುವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲು ಪ್ರಾರಂಭಿಕ ಅಧಿಸೂಚನೆ ಹೊರಡಿಸಲು ನಿಯಮಗಳಲ್ಲಿ ಅವಕಾಶವಿಲ್ಲ.

ವಿಷಯ :- ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ಮನೆಗಳನ್ನು ಕಟ್ಟಿರುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2315 (1228)

ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) :- ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ಎಷ್ಟು ಮನೆಗಳನ್ನು ಯಾವ ಯಾವ ಸ್ಥಳಗಳಲ್ಲಿ ಕಟ್ಟಲಾಗಿದೆ.?

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :-

ಅ) ಕರ್ನಾಟಕ ಗೃಹ ಮಂಡಳಿಯು ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಒಟ್ಟು 2677 ಮನೆಗಳನ್ನು ಕಟ್ಟಲಾಗಿದೆ. ಸ್ಥಳವಾರು ವಿವರ ಕೆಳಕಂಡಂತೆ ಇದೆ.

1) ನಾಗಶೆಟ್ಟಿ ಕೊಪ್ಪ, ಹುಬ್ಬಳ್ಳಿ
2) ಹಳೇ ಎಂ.ಟಿ.ಎಸ್ ಕಾಲೋನಿ
3) ಹೊಸ ಎಂ.ಟಿ.ಎಸ್ ಕಾಲೋನಿ
4) ಕೆಂಪಗೇರಿ, ಧಾರವಾಡ
5) ಕೊಪ್ಪಕೆರೆ, ಧಾರವಾಡ
6) ತೋಪಲಗಟ್ಟಿ, ಹುಬ್ಬಳ್ಳಿ
7) ಹೆಗ್ಗೇರಿ ಬಡಾವಣೆ
8) ಚಾಣಕ್ಯಪುರಿ, ಹುಬ್ಬಳ್ಳಿ
9) ಗೋಪನಕೊಪ್ಪ, ಹುಬ್ಬಳ್ಳಿ
10) ಡಿಡಿಪಿಐ ಕಾಂಪೌಂಡ್, ಧಾರವಾಡ
11) ಜಡ್ಜ್ ಕ್ವಾಟರ್ಸ್, ಧಾರವಾಡ
12) ಕೃಷ್ಣಾಪುರ, ಹುಬ್ಬಳ್ಳಿ
13) ಕೇಶಾವಪುರ, ಹುಬ್ಬಳ್ಳಿ
14) ವಿಕಾಸನಗರ, ಹುಬ್ಬಳ್ಳಿ
15) ಉಣಕಲ್, ಹುಬ್ಬಳ್ಳಿ
16) ನವನಗರ, ಹುಬ್ಬಳ್ಳಿ
17) ಡಿ.ಎನ್.ಕೊಪ್ಪ, ಧಾರವಾಡ
18) ವಿವೇಕಾನಂದ ಕಾಲೋನಿ, ಹುಬ್ಬಳ್ಳಿ.